


ಕೊನೆಗಾಣಬೇಕಾಗಿದೆ. ಪಶ್ಚಿಮದ ವೈಜ್ಞಾನಿಕ ತಂತ್ರಜ್ಞಾನದ ಸಹಾಯದಿಂದ ಈ ಯುಗದಲ್ಲಿ ಮನುಷ್ಯಕುಲವು ಭೌತಿಕಸ್ತರದಲ್ಲಿ ಒಂದುಗೂಡಿದೆ. ಆದರೆ ಪಶ್ಚಿಮದ ಈ ಪರಿಣತಿ ದೂರವನ್ನು ಕಡಮೆ ಮಾಡಿದರೂ, ಬೇರೆ ಬೇರೆ ಜನಾಂಗಗಳಲ್ಲಿ ಅತ್ಯಂತ ವಿನಾಶಕಾರಿಯಾದ ಶಸ್ತ್ರಾಸ್ತ್ರಗಳನ್ನು ತುಂಬಿಸಿದೆ. ಅದು ಎಷ್ಟರಮಟ್ಟಿಗೆ ಹೋಗಿದೆಯೆಂದರೆ, ಅತ್ಯಂತ ಸಮೀಪದಲ್ಲೇ ಸರ್ವನಾಶದ ಹೋರಾಟಕ್ಕೆ ಸಿದ್ಧರಾಗಿರುವಂತೆ ಅವುಗಳನ್ನು ಮುಖಾಮುಖಿ ನಿಲ್ಲಿಸಿದೆ.

ಆದರೆ, ಒಬ್ಬರನ್ನೊಬ್ಬರು ಅರಿತುಕೊಂಡು ಪರಸ್ಪರ ಪ್ರೀತಿಸುವುದು ಹೇಗೆ ಎಂಬುದನ್ನು ತಿಳಿಯುವ ಪ್ರಯತ್ನ ಮಾತ್ರ ಸ್ವಲ್ಪವೂ ಎಲ್ಲಿಯೂ ಕೈಗೂಡುತ್ತಿಲ್ಲ. ಇಂಥ ಗಂಡಾಂತರದ ಪರಿಸ್ಥಿತಿಯ ಅಂಚಿನಲ್ಲಿ ಮಾನವ ಜನಾಂಗ ಬಂದುನಿಂತಿದೆ. ಶ್ರೀರಾಮಕೃಷ್ಣ, ಗಾಂಧೀಜಿ, ಅಶೋಕ ಚಕ್ರವರ್ತಿ – ಇವರ ಸಂದೇಶಗಳನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿ ಕಾರ್ಯರೂಪಕ್ಕೆ ತರುವುದೇ ಈ ಬಗೆಯ ಗಂಡಾಂತರದಿಂದ ಪಾರಾಗುವ ಉಪಾಯ. ಅದಕ್ಕೆ ಮುಖ್ಯ ಕಾರಣವೇನೆಂದರೆ ಈ ಉಪದೇಶಗಳು ಯಥಾರ್ಥವಾದುವು. ಅಂದರೆ ಅಧ್ಯಾತ್ಮದ ಸಮ್ಯಗ್‌ದರ್ಶನದಿಂದ ಮೂಡಿಬಂದವು. ಈ ಸಮನ್ವಯ ಸಂದೇಶವನ್ನು ಅನುಸರಿಸುವುದರಿಂದಲೇ ಜಗತ್ತಿನ ಕ್ಷೇಮವು ಸಾಧ್ಯ."

ಇದು ವಿಶ್ವವಿಖ್ಯಾತ ಇತಿಹಾಸತಜ್ಞನಾದ ಆರ್ನಾಲ್ಡ್ ಟಾಯನ್‌ಬಿಯ ಅಭಿಪ್ರಾಯ.

## ದೀನ ದಲಿತರನ್ನು ಮೇಲಕ್ಕೆತ್ತಿ

ತಮ್ಮ ಪರಿವ್ರಾಜಕ ದಿನಗಳಲ್ಲಿ, ಸ್ವಾಮೀಜಿ ಬಡಜನರ ಕಷ್ಟಗಳನ್ನು ಕಣ್ಣಾರೆ ಕಂಡು ದುಃಖಿತಪ್ತರಾಗಿದ್ದರು. ಭಾರತದ ಬಡಜನರ ಪರವಾಗಿ ಅಷ್ಟೊಂದು ತೀವ್ರ ಮರುಕದಿಂದ, ತಡೆಯಲಾಗದ ನೋವಿನಿಂದ ಮಾತನಾಡಿದ, ಅವರ ಪರವಾಗಿ ವಾದಿಸಿದ ಮತ್ತೊಬ್ಬ ಆಧ್ಯಾತ್ಮಿಕ ವೀರನನ್ನು ದೇಶ ಕಂಡರಿಯದು ! ಇಡಿಯ ರಾಷ್ಟ್ರ ಒಂದು ಎಂಬ ಭಾವನೆ ಮತ್ತು ಪ್ರತಿಯೊಬ್ಬ ಭಾರತೀಯನ ಅಭ್ಯುದಯವನ್ನೂ ಕಾಣುವಂತಾಗಬೇಕೆಂಬ ಹಂಬಲವೇ ರಾಷ್ಟ್ರೀಯ ಪ್ರಜ್ಞೆಯ ಮೂಲ. ಈ ಭಾವದ ಬೀಜಾರೋಪಣೆಯನ್ನು ತಮ್ಮ ಬದುಕು ಹಾಗೂ ಕಾರ್ಯಗಳ ಮೂಲಕ ಮಾಡಿದ ಸ್ವಾಮಿ ವಿವೇಕಾನಂದರು ರಾಷ್ಟ್ರೀಯತೆಯ ಜ್ವಲಂತ ಪ್ರತೀಕವಾದರು. ಕಳೆದ ಶತಮಾನದಲ್ಲಿ ಹೆಸರಾಂತ ಸಮಾಜಸುಧಾರಕರು ವಿಧವಾವಿವಾಹ, ಮೂರ್ತಿಪೂಜೆಯ ಅರ್ಥಹೀನತೆ ಮುಂತಾದ ವಿಚಾರಗಳ ಚಿಂತನೆ ಮತ್ತು ಪ್ರಚಾರಗಳಲ್ಲಿ ತೊಡಗಿದ್ದಾಗ, ಸ್ವಾಮೀಜಿ ಗಂಭೀರವಾಗಿ ಹೀಗೆ ಎಚ್ಚರಿಕೆ ನೀಡಿದರು: "ಜನಸಾಮಾನ್ಯರನ್ನು ಕಡೆಗಣಿಸಿದುದು ರಾಷ್ಟ್ರದ ಒಂದು ಮಹಾಪಾಪ..... ದೇಶ ಗುಡಿಸಿಲಿನಲ್ಲಿ ವಾಸಿಸುತ್ತಿದೆ ಎಂಬುದನ್ನು ನೆನಪಿಡಿ. ಆದರೆ ಅಯ್ಯೋ! ಅವರಿಗಾಗಿ ಯಾರೂ ಏನೂ ಮಾಡಲಿಲ್ಲ ! ದೇಶದ ಅದೃಷ್ಟ ಅಲ್ಲಿರುವ ವಿಧವೆಯರಿಗೆ ಸಿಗುವ ಗಂಡಂದಿರ ಸಂಖ್ಯೆಯಲ್ಲಿಲ್ಲ, ಆದರೆ ಜನಸಾಮಾನ್ಯರ ಸ್ಥಿತಿಗತಿಯ ಮೇಲೆ ಆಧರಿಸಿದೆ. ಅವರ ಆಂತರಿಕ ಆಧ್ಯಾತ್ಮಿಕ ಸ್ವಭಾವವನ್ನು ನಾಶಮಾಡದೆ, ಅವರು ಕಳೆದುಕೊಂಡ ವ್ಯಕ್ತಿತ್ವವನ್ನು ಹಿಂದಿರುಗಿಸಬಲ್ಲಿರಾ?... ಮಾಡಬೇಕಾದ ಕೆಲಸವೇ ಇದು."

"ಕಡು ಬಡತನ ಮತ್ತು ಅಜ್ಞಾನದಲ್ಲಿ ಎಂದೆಂದೂ ಮುಳುಗಿಕೊಂಡಿರುವ ಮೂವತ್ತು ಕೋಟಿ ಸ್ತ್ರೀ–ಪುರುಷರ ಬಗೆಗೆ ಭಾವಿಸುವವರು ಯಾರಿದ್ದಾರೆ, ಮರುಕಪಡುವವರು ಯಾರಿದ್ದಾರೆ?" ಎಂದು ಮನನೊಂದು ಪ್ರಶ್ನಿಸುತ್ತಾರೆ ಸ್ವಾಮೀಜಿ.

ಮನುಷ್ಯನಿಗೆ ಬೇರೆ ಯಾವ ಸಹಾಯವೂ ದೊರಕದು. ಹಿಂದೆ ಅದು ಇರಲಿಲ್ಲ, ಈಗಲೂ ಅದು ದೊರಕದು, ಮುಂದೆಯೂ ಅದು ದೊರಕುವುದಿಲ್ಲ. ನಿನ್ನ ಸಂಕಷ್ಟಗಳಿಂದ ಪಾರುಮಾಡಿಕೊಳ್ಳಬೇಕಾದವನು ನೀನೇ! ನಿನ್ನನ್ನು ರಕ್ಷಿಸಿಕೊಳ್ಳಬೇಕಾದವನು ನೀನೇ! ನಿನಗೆ ಯಾರೂ ಸಹಾಯಮಾಡಲಾರರು – ಹಿಂದೆಯೂ ನಿನಗೆ ಯಾರೂ ಸಹಾಯ ಮಾಡಿಲ್ಲ. ಹಾಗೆ ಸಹಾಯ ದೊರಕುವುದೆಂದು ಯೋಚಿಸುವುದು ಸಿಹಿಯಾದ ಭ್ರಮೆಯಲ್ಲದೆ ಬೇರಲ್ಲ. ಇದರಿಂದ ಯಾವ ಒಳಿತೂ ಉಂಟಾಗದು. – *ಸ್ವಾಮಿ ವಿವೇಕಾನಂದ*